**ಚಾಸಾ- 1ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.14203/2014**

| | |
|---|---|
| **ಸಾಕ್ಷಿದಾರರ ಹೆಸರು** | ಹರಿ.ಜೆ. |
| **ತಂದೆಯ ಹೆಸರು** | ಎಸ್.ಇ. ಜಯರಾಮ. |
| **ವಯಸ್ಸು** | 56 ವರ್ಷ |
| **ಉದ್ಯೋಗ** | ಕಮೀಷನರ್ , ರಿಜಿನಲ್ ಫ್ರಾವಿಡೆಂಟ್ ಫಂಡ್ , |
| **ವಾಸ** | ಕೆ.ಆರ್.ಪುರಂ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 19.11.2025. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 1999 ರಿಂದ 2017 ರವರೆಗೆ ಇಪಿಎಫ್ ಕಛೇರಿಯಲ್ಲಿ ಎನ್ ಫೋರ್ಸ್ ಮೆಂಟ್ ಅಫೀಸರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮೆಸಸ್. ಮಸ್ಟ್ ಇನೋವೇಟಿವ್ ಪ್ರೈವೇಟ್.ಲಿ. ಕಂಪನಿಯ ಕಡೆಯಿಂದ ಆರೋಪಿತರು ಗೊತ್ತು. ಚಾಸಾ-4 ಮತ್ತು 5 ರವರು ಗೊತ್ತು. ಇಪಿಎಫ್ ಕಾಂಟ್ರಿಬ್ಯೂಷನ್ ನಿಂದ ನೌಕರರ ವೇತನದಿಂದ ಶೇ.12 ರಷ್ಟು ಹಣವನ್ನು ಕಡಿತಗೊಳಿಸುತ್ತೇವೆ. ಸದರಿ ಹಣವನ್ನು ಪ್ರತಿ ತಿಂಗಳು 15ನೇ ತಾರೀಖಿನ ಒಳಗೆ ಉದ್ಯೋಗಿಯು ಪಾವತಿ ಮಾಡ ಬೇಕಾಗುತ್ತದೆ. ಈ ಹಣವನ್ನು ಪಾವತಿ ಮಾಡಲಿಲ್ಲ ಎಂದರೆ ನಾವು ದೂರನ್ನು ದಾಖಲು ಮಾಡುತ್ತೇವೆ. ಕಂಪನಿಯ ಮಾಲೀಕರು ಸದರಿ ಹಣವನ್ನು ಕಟ್ಟಲಿಲ್ಲ ಎಂದರೆ ಕಲಂ.7(ಎ) ಆಫ್ ಇಪಿಎಫ್ ಅಂಡ್ ಎಂಪಿ ಆ್ಯಕ್ಟ್ -1952 ಪ್ರಕಾರ ಇಲಾಖೆಯ ವಿಚಾರಣೆಯನ್ನು ನಡೆಸಿ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಫೆಬ್ರವರಿ 2011 ರಿಂದ ಜೂನ್ 2013 ರವರೆಗೆ ಆರೋಪಿತರು ಸಂಸ್ಥೆಯ ನೌಕರರ ಸಂಬಳದಲ್ಲಿ ಸರ್ಕಾರದ ಭವಿಷ್ಯ ನಿಧಿಗೆ ಪಾವತಿ ಮಾಡಿರುವುದಿಲ್ಲ. ಅದುದರಿಂದ ಆರೋಪಿತರ ವಿರುದ್ದ ದೂರನ್ನು ನೀಡಿರುತ್ತೇನೆ. ಮೆಸಸ್. ಮಸ್ಟ್ ಇನೋವೇಟಿವ್ ಪ್ರೈವೇಟ್.ಲಿ. ಕಂಪನಿಯಲ್ಲಿ ಸುಮಾರು 40 ರಿಂದ 60 ಜನ ನೌಕರರು ಕೆಲಸ ಮಾಡುತ್ತಿದ್ದರು. ಆದರೆ ಸದರಿ ನೌಕರರ ಸಂಬಳದ ರಿಜಿಸ್ಟರ್ ನಲ್ಲಿ ಹಣವೂ ಕಡಿತವಾಗಿತ್ತು. ಸುಮಾರು 40 ರಿಂದ 50ಲಕ್ಷದಷ್ಟು

ಹಣವನ್ನು ಒಂದು ಮತ್ತು ಎರಡನೇ ಆರೋಪಿತರು ಸರ್ಕಾರದ ಭವಿಷ್ಯನಿಧಿಗೆ ಪಾವತಿ ಮಾಡದೇ ಮೋಸ ಮಾಡಿರುತ್ತಾರೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ದಿ.24.10.2013 ರಂದು ಘಟನಾ ಸ್ಥಳಕ್ಕೆಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-2 ಮತ್ತು 3 ರವರು ಹಾಜರಿದ್ದರು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 02.00 ರಿಂದ 03.00 ಗಂಟೆವೆರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ದಿ.24.10.2013 ರಂದು ಜರುಗಿಸಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಒಂದು ಮತ್ತು ಎರಡನೇ ಆರೋಪಿತರು ಗೊತ್ತು. ಒಂದು ಮತ್ತು ಎರಡನೇ ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲು : ಶ್ರೀ.ಎ.ಸಿ.ಎಂ. ಆರೋಪಿತರ ಪರ ವಕೀಲರಿಂದ</u>**

ನಾನು ದೂರನ್ನು ದಿ.25.09.2013ರಂದು ನೀಡಿರುತ್ತೇನೆ ಎಂದರೆ ಸರಿ. ದಿ.08.10.2013 ರಂದು ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಆರೋಪಿತರ ಕಂಪನಿಯು ನೊಂದಾಯಿತ ಕಂಪನಿ ಎಂದರೆ ಸರಿ. ಅದಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಒಂದು ಮತ್ತು ಎರಡನೇ ಆರೋಪಿತರು ಕಂಪನಿಯ ನಿರ್ದೇಶಕರು ಎಂದರೆ ಸರಿ. ನೌಕರರ ಪಿಎಫ್ ಹಣವನ್ನು ಕಡಿತಗೊಳಿಸುವ ಜವಾಬ್ದಾರಿ ನಗದು ವಿಭಾಗಕ್ಕೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ. ನಿರ್ದೇಶಕರಿಗೆ ಪಿಎಫ್ ಹಣದ ಬಗ್ಗೆ ಗೊತ್ತಿರುವುದಿಲ್ಲ ಮತ್ತು ಅದು ನಗದು ವಿಭಾಗದವರಿಗೆ ಗೊತ್ತಿರುತ್ತದೆ ಎಂದರೆ ಸಾಕ್ಷಿಯು ನಿರ್ದೇಶಕರಿಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. ನೌಕರರು ತಮ್ಮ ಪಿಎಫ್ ಹಣದ ಸಂಬಂದ ನಮಗೆ ದೂರು ಕೊಟ್ಟಿರುವ ಬಗ್ಗೆ ದಾಖಲೆ ಇಲ್ಲ. ನಾನು ಹೇಳುವ ನೌಕರರು ಆ ಸಂದರ್ಭದಲ್ಲಿ ಕೆಲಸ ಮಾಡುತ್ತಿರಲಿಲ್ಲ ಹಾಗಾಗಿ ಅವರ ವೇತನದಲ್ಲಿ ಪಿಎಫ್

**ಚಾಸಾ- 1ಪ್ರಾಸಾ-1**

ಹಣವನ್ನು ಕಡತ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಕಂಪನಿಯ ನೌಕರರ ಕೆಲಸ ಮಾಡುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ದೂರನ್ನು ನೀಡಲು ನಮ್ಮ ಮೇಲಾಧಿಕಾರಿಗಳ ಅನುಮತಿ ಬೇಕಾಗಿಲ್ಲ, ಎನ್ ಪೋರ್ಸ್ ಮೆಂಟ್ ಆ್ಯಕ್ಟ್ ಕಲಂ.13 ರಪ್ರಕಾರ ದೂರು ನೀಡುವ ಅಧಿಕಾರವನ್ನು ಹೊಂದಿರುತ್ತೇವೆ. ಅಸ್ಸಿಸ್ಟೆಂಟ್ ಕಮೀಷನರ್ ರವರ ಆದೇಶದ ಮೇರೆಗೆ ಆರೋಪಿತರು ಸಂಪೂರ್ಣ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಸಂಪೂರ್ಣ ಹಣವನ್ನು ಪಾವತಿ ಮಾಡಿದ್ದರು ಸಹ ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಕ್ಕೆನ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ಪಂಚನಾಮೆ ಜರುಗಿಸಿರುವಾಗ ಪೊಲೀಸರು ಮತ್ತು ಕಿರಣ್ ಎನ್ನುವ ನೌಕರರು ಇದ್ದರು. ನಿಪಿ.2 ರಲ್ಲಿ ಪಂಚನಾಮೆ ಮಾಡುವ ಸಮಯದಲ್ಲಿ ಯಾರ್ಯಾರು ಹಾಜರಿದ್ದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.2 ಪಂಚನಾಮೆಯ ಚೆಕ್ಕು ಬಂಧಿಯನ್ನು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಸುಮಾರು 10 ರಿಂದ 12 ವರ್ಷಗಳಾಗಿದ್ದರಿಂದ ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ.2 ನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**